ಪಡಿತರ ಚೀಟಿ

555 (996) ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್ (ಗೌರಿಬಿದನೂರ) : ಮಾನ್ಯ ಆಹಾರ, ನಾಗರಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಚೀಟಿಯ ಪೂರೈಕೆ ಹಾಗೂ ವಿತರಣೆ ಸಕ್ರಮವಾಗಿ ವಿತರಣೆ ಆಗಿದೆಯೇ;

ಆ) ಇನ್ನು ಕೈಬಿಟ್ಟಿರುವ ಕುಟುಂಬಗಳಿಗೆ ಯಾವಾಗ ಪೂರೈಕೆ ಮಾಡಲಾಗುವುದು;

ಪಡಿತರದಾರರ ಹೆಸರು ವಿಳಾಸ, ಪ್ರತಿ ಎಫ್.ಪಿ.ಡಿ. ಕೇಂದ್ರಗಳಲ್ಲಿ ಪ್ರಕಟಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡಿರುವ ಕ್ರಮವೇನು;

ಇ) ಸುಮಾರು ಕೇಂದ್ರಗಳಲ್ಲಿ ಆಹಾರ ಪದಾರ್ಥಗಳನ್ನು 2–3 ರಿಂದ ವಿತರಿಸಿ ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

- ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಹಾಲಪ್ಪ (ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ಪ್ರಸ್ತುತ ಖಾಯಂ ಗಣಕೀಕೃತ ಪಡಿತರ ಚೀಟಿ ವಿತರಣೆ ರಾಜ್ಯಾದ್ಯಂತ ನಡೆಯುತ್ತಿದ್ದು, ಬಿಟ್ಟು ಹೋಗಿರುವರು ತಾಲ್ಲೂಕು ಮಟ್ಟದಲ್ಲಿ ಬ್ಯಾಕ್ ಆಫೀಸ್‌ಗಳನ್ನು ಸಂಪರ್ಕಿಸಿ ತಮ್ಮ ಪಡಿತರ ಚೀಟಿಯನ್ನು ಪಡೆಯಬಹುದಾಗಿದೆ.

ಹೌದು.

ಪ್ರಸ್ತುತ ಖಾಯಂ ಗಣಕೀಕೃತ ಪಡಿತರ ಚೀಟಿ ವಿತರಣೆ ರಾಜ್ಯಾದ್ಯಂತ ನಡೆಯುತ್ತಿದ್ದು, ಪ್ರಕ್ರಿಯೆ ಮುಗಿದ ನಂತರ ದತ್ತಾಂಶವನ್ನು ಕ್ರೋಢೀಕರಿಸಿ, ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರ ವಿವರಗಳನ್ನು ಪ್ರಕಟಿಸಲಾಗುವುದು.

ಇ) ಹೌದು.

ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ತಿಂಗಳ ಪೂರ್ತಿ ಬಾಗಿಲು ತೆರೆಯಲು ಹಾಗೂ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆ ಮಾಡಲು

ಆದೇಶ ನೀಡಲಾಗಿದೆ. ಮೇಲುಸ್ತುವಾರಿ ಮಾಡಲು ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ 7 ಜನ ಸದಸ್ಯರ ಜಾಗೃತಿ ಸಮಿತಿಯನ್ನು ರಚಿಸಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಹಾರ ಖಾತರಿ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಹಾರ ಭದ್ರತಾ ಸಮಿತಿಯನ್ನು ರಚಿಸಲಾಗಿದೆ.

ರಸ್ತೆಗಳನ್ನು ಬೇಗ ಅಭಿವೃದ್ಧಿಪಡಿಸುವುದು

557 (998) ಶ್ರೀ ಸಿದ್ದು ಸವದಿ (ತೆರದಾಳ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೇಶಿಪ್ ಯೋಜನೆ ಯಾವಾಗಿನಿಂದ ಪ್ರಾರಂಭವಾಯಿತು; ಈಗಾಗಲೇ ಎಷ್ಟು ರಸ್ತೆಗಳನ್ನು ಈ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ (ಜಿಲ್ಲಾವಾರು, ರಸ್ತೆಯ ಹೆಸರು ಸಹಿತ ಪೂರ್ಣ ಮಾಹಿತಿ ನೀಡುವುದು);

ಆ) ಜಮಖಂಡಿ, ಖಾಗವಾಡ ಮತ್ತು ಮುಧೋಳ ನಿಪ್ಪಾಣಿ ಈ ಎರಡೂ ರಸ್ತೆಗಳು ಕೇಶಿಪ್ ಯೋಜನೆಯಲ್ಲಿ ಇದ್ದು, ಯಾವಾಗ ಪ್ರಾರಂಭಿಸಲಾಗುವುದು;

ಇ) ಅಲ್ಲಿಯವರೆಗೆ, ಈ ರಸ್ತೆಗಳನ್ನು ಯಾವ ಅನುದಾನದಲ್ಲಿ ದುರಸ್ತಿ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಕೆಶಿಪ್ ಯೋಜನೆಯನ್ನು 2001 ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆ ಅಡಿಯಲ್ಲಿ 2395 ಕಿಮೀ. ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಜಮಖಂಡಿಯಿಂದ ತೇರುದಾಳ–ಕುಡುಚಿ–ಮನಗಸುಳಿ–ಮಹಾರಾಷ್ಟ್ರ ಗಡಿವರೆಗಿನ 79 ಕಿಮೀ. ರಸ್ತೆ ಹಾಗೂ ಮುಧೋಳದಿಂದ ಮಾಲಿಂಗಪುರ ಕಬ್ಬೂರು ಮಾರ್ಗವಾಗಿ ನಿಪ್ಪಾಣಿವರೆಗಿನ 104 ಕಿಮೀ. ರಸ್ತೆ ಅಭಿವೃದ್ಧಿಯನ್ನು ಕೆಶಿಪ್–II ಯೋಜನೆ ಅಡಿಯಲ್ಲಿ ಸೇರಿಸಲಾಗಿದೆ.